‘ನಾಗಕನ್ನಿಕೆ’ ಧಾರಾವಾಹಿಯಲ್ಲಿ ನಟಿಸಿದೆ. ಆಗ ‘ಅಯ್ಯೊ, ಧಾರಾವಾಹಿ ಮಾಡ್ತಿದ್ದಾಳೆ. ಸಿನಿಮಾಗೆ ಬೇಡ’ ಎಂಬ ಮಾತುಗಳು ಶುರುವಾದವು. ಆದರೆ ನಾನು ಜಗಮೊಂಡಿ. ಎಷ್ಟು ಜನ ರಿಜೆಕ್ಟ್ ಮಾಡಿದರೂ ಮತ್ತೆ ಮತ್ತೆ ಆಡಿಷನ್ ಕೊಡುತ್ತಲೇ ಇದ್ದೆ. ಒಳ್ಳೆಯ ಪಾತ್ರಕ್ಕಾಗಿ ಕಾಯುತ್ತಲೇ ಇದ್ದೆ.

ಆ ನಿರಾಸೆಯ ದಿನಗಳನ್ನು ದಾಟಿಕೊಂಡಿದ್ದು ಹೇಗೆ?

ಮಧ್ಯಮವರ್ಗದ ಕುಟುಂಬದಲ್ಲಿ ಬೆಳೆಯುವ ಮಕ್ಕಳಿಗೆ ಯಾವುದೂ ಆಸೆಪಟ್ಟ ತಕ್ಷಣ ಸಿಗಲ್ಲ. ಒಂದು ಆಟದ ಗೊಂಬೆ ಕೇಳಿದ್ರೂ ತಕ್ಷಣ ಕೊಡಿಸುವುದಿಲ್ಲ. ನನಗೂ ಹಾಗೆ, ಬೇಕು ಅಂದಾಕ್ಷಣ ಯಾವುದೂ ಸಿಕ್ಕಿಲ್ಲ. ಅದಕ್ಕೋಸ್ಕರ ಕಷ್ಟಪಟ್ಟು ಓದಿ, ಫಸ್ಟ್ ರ್‍ಯಾಂಕ್ ಬಂದ್ರೆ ಆವಾಗ ಕೊಡಿಸುತ್ತಿದ್ದರು. ಹಾಗಾಗಿ ಆಸೆಪಟ್ಟಿದ್ದು ಸಿಕ್ಕಿಲ್ಲ ಅಂದಾಕ್ಷಣ ಹತಾಶಳಾಗುವುದು ನನ್ನ ರಕ್ತದಲ್ಲಿಯೇ ಇಲ್ಲ. ನಿರಂತರವಾಗಿ ಶ್ರಮವಹಿಸಿ, ಹಟ ಹಿಡಿದು ದಕ್ಕಿಸಿಕೊಳ್ಳುವುದು ಅಭ್ಯಾಸವಾಗಿಬಿಟ್ಟಿದೆ. ಚಿತ್ರರಂಗದಲ್ಲಿ ಈಗ ನಾನು ಏನನ್ನು ಗಳಿಸಿಕೊಂಡಿದ್ದೇನೋ, ಅವೆಲ್ಲವೂ ನಾನು ಕಷ್ಟಪಟ್ಟೇ ದಕ್ಕಿಸಿಕೊಂಡಿರುವುದು.

ಚಿತ್ರರಂಗದಲ್ಲಿ ಏನೋ ದೊಡ್ಡ ಜಾದೂ ಮಾಡಿಬಿಡ್ತೀನಿ, ಕಡೆತನಕ ಇರ್ತೀನಿ ಎಂದೆಲ್ಲ ಭ್ರಮೆ ಇಲ್ಲ. ನಮಗೊಂದು ಕಾಲಮಿತಿ ಇದೆ. ಅದರಲ್ಲಿಯೇ ನಾವು ಕೆಲಸ ಮಾಡಬೇಕು. ನಂತರ ಹೊಸ ನೀರು ಬರ್ತಾ ಇರತ್ತೆ. ಅವರಿಗೆ ಅವಕಾಶ ಮಾಡಿಕೊಟ್ಟು ನಾವು ಹೋಗ್ತಾ ಇರಬೇಕು. ಇದು ವಾಸ್ತವ. ಐ ಆ್ಯಮ್ ವೆರಿ ವೆರಿ ವೆರಿ ಡ್ಯಾಮ್ ಪ್ರಾಕ್ಟಿಕಲ್ ಹುಡುಗಿ. ಆದರೆ ಈ ಕಲರ್‌ಫುಲ್ ಜಗತ್ತು ನನ್ನಂಥ ಹುಡುಗಿಯರಿಗೆ ತುಂಬ ದೂರದ ಜಗತ್ತು. ಅದನ್ನು ಈ ಕ್ಷಣಕ್ಕೆ ಎಂಜಾಯ್ ಮಾಡ್ತಾ ಇದ್ದೀನಿ.

ಸಿನಿಮಾಗಳ ಆಯ್ಕೆಯಲ್ಲಿ ನೀವು ವಹಿಸುವ ಎಚ್ಚರಗಳೇನು?

ಬರೀ ನಾಯಕನ ಹಿಂದೆ ಸುತ್ತಲಿಕ್ಕಾಗಿ ಒಬ್ಬಳು ನಾಯಕಿ ಬೇಕು ಎಂಬ ಕಾರಣಕ್ಕೆ ಸೃಷ್ಟಿಗೊಂಡ ಪಾತ್ರಗಳನ್ನು ಖಂಡಿತ ಒಪ್ಪಿಕೊಳ್ಳಲಾರೆ. ಈ ಚಿತ್ರರಂಗದಲ್ಲಿ ಉಳಿದುಕೊಳ್ಳಲಿಕ್ಕಾಗಿ ಕೆಲವೊಮ್ಮೆ ನಮಗೆ ಅಷ್ಟು ಇಷ್ಟವಾಗದ ಸಿನಿಮಾಗಳನ್ನೂ ಮಾಡಬೇಕಾಗುತ್ತದೆ. ಆ ಥರದ ಸಿನಿಮಾಗಳನ್ನೂ ಮಾಡುತ್ತೇನೆ. ಆದರೆ ನನ್ನ ಆತ್ಮತೃಪ್ತಿಗೋಸ್ಕರ ‘ಆಪರೇಷನ್ ನಕ್ಷತ್ರ’, ‘ರಂಗನಾಯಕಿ’ಯಂಥ ಸಿನಿಮಾಗಳಲ್ಲಿ ನಟಿಸುತ್ತೇನೆ. ಕಮರ್ಷಿಯಲ್ ಉದ್ದೇಶ ಮತ್ತು ಆತ್ಮತೃಪ್ತಿ ಎರಡೂ ದಾರಿಯನ್ನು ಸಮದೂಗಿಸಿಕೊಂಡು ಸಾಗುತ್ತಿದ್ದೇನೆ.

ಯಾವ ಬಗೆಯ ಪಾತ್ರಗಳ ಮೂಲಕ ನಿಮ್ಮನ್ನು ಗುರ್ತಿಸಿಕೊಳ್ಳಲು ಬಯಸುತ್ತೀರಿ?

ಹೆಣ್ಣು ಚಂಚಲೆ ಅನ್ನುತ್ತಾರೆ. ಅವಳು ಚಂಚಲೆಯಲ್ಲ, ಭಾವನೆಗಳ ಗೊಂಚಲು. ಹಲವು ಕೆಲಸಗಳನ್ನು, ಪಾತ್ರಗಳನ್ನು ಏಕಕಾಲದಲ್ಲಿ ನಿರ್ವಹಿಸುವ ಶಕ್ತಿ ಅವಳಿಗೆ ಇರುತ್ತದೆ. ಹೆಣ್ಣಿನ ಇಂಥ ಭಾವಲೋಕವನ್ನು ಅನಾವರಣಗೊಳಿಸುವ, ಅಭಿವ್ಯಕ್ತಿಗೊಳಿಸುವ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು ಎನ್ನುವುದು ನನ್ನ ಆಸೆ ಮತ್ತು ಆದ್ಯತೆ. ಹಾಗೆಯೇ ಪೌರಾಣಿಕ ಪಾತ್ರಗಳೂ ನನಗೆ ತುಂಬ ಇಷ್ಟ.

ನಿಮ್ಮ ಅಭಿನಯದ ಮೂಲದ್ರವ್ಯ ಪಡೆದುಕೊಳ್ಳುವುದು ಎಲ್ಲಿಂದ?

ನಾನು ತೀರಾ ಎಮೋಶನಲ್ ಹುಡುಗಿ. ಬೇಗ ಅಳ್ತೀನಿ, ಬೇಗ ನಗ್ತೀನಿ, ಬೇಗ ಸಿಟ್ಟಾಗ್ತೀನಿ, ಬೇಗ ಕಾಮ್ ಆಗ್ತೀನಿ. ಈ ಮಿಡಲ್ ಕ್ಲಾಸ್ ಫ್ಯಾಮಿಲಿ ಇದ್ಯಲ್ಲಾ, ಅದ್ಭುತವಾದ ಜಗತ್ತು ಅದು. ಸಂತೋಷವನ್ನೂ ನೋಡಿರ್ತೀವಿ; ದುಃಖವನ್ನೂ ನೋಡಿರ್ತೀವಿ. ಒಂದು ಲಕ್ಷ ಖರ್ಚು ಮಾಡಿರ್ತೀವಿ; ಒಂದು ಸಾವಿರದಲ್ಲಿಯೂ ಬದುಕಿರ್ತೀವಿ. ಈ ಸ್ವಭಾವ ಮತ್ತು ಬೆಳೆದು ಬಂದ ವಾತಾವರಣ, ನನ್ನ ನಟನೆಗೆ ಸಹಾಯ ಮಾಡಿದೆ. ಹಾಗಾಗಿಯೇ ತುಂಬ ಸುಲಭವಾಗಿ ಮತ್ತು ಬೇಗ ಪಾತ್ರದೊಳಗೆ ಪ್ರವೇಶ ಮಾಡಬಲ್ಲೆ. ನನ್ನ ಬದುಕಿನ ಅನುಭವವೇ ನನ್ನ ನಟನಾಭಿವ್ಯಕ್ತಿಯ ಮೂಲದ್ರವ್ಯ. ಹಳೆಯ ಸಿನಿಮಾಗಳನ್ನು ತುಂಬಾ ನೋಡ್ತೀನಿ. ಕಾದಂಬರಿಗಳನ್ನು ಓದ್ತೀನಿ. ಇವೆಲ್ಲವೂ ಪಾತ್ರಕ್ಕೆ ಹೊಂದಿಕೊಳ್ಳಲು ಸಹಾಯಮಾಡುತ್ತವೆ.

ನಿಮ್ಮ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ನಟನೆಯ ಪ್ರಭಾವ ಎಂಥದ್ದು?

ನಟನೆ ಎನ್ನುವುದು ಕಲ್ಪನೆಯ ಪಾತ್ರವನ್ನು ಜೀವಂತವಾಗಿಸುವ ಪ್ರಕ್ರಿಯೆ. ಇದು ಮತ್ತೊಂದು ದೃಷ್ಟಿಯಿಂದ ಕಲಾವಿದರಿಗೆ ಸಿಗುವ ಮರುಹುಟ್ಟೂ ಹೌದು. ಒಂದೊಂದು ಪಾತ್ರದಲ್ಲಿ ನಟಿಸಿ ಮುಗಿಸುವಾಗಲೂ ನಾವು ಅಷ್ಟು ಹೊಸತಾಗಿರುತ್ತೇವೆ; ನಮ್ಮ ವ್ಯಕ್ತಿತ್ವ ಅಷ್ಟು ಬೆಳೆದಿರುತ್ತದೆ.

‘ರಂಗನಾಯಕಿ’ ಸಿನಿಮಾದಲ್ಲಿ ನನ್ನದು ಅತ್ಯಾಚಾರಕ್ಕೆ ಒಳಗಾದ ಹುಡುಗಿಯ ಪಾತ್ರ. ನಾನು, ಟೀವಿ ಚಾನಲ್‌ನಲ್ಲಿ ಅತ್ಯಾಚಾರದ ಸುದ್ದಿ ಪ್ರಸಾರವಾಗುತ್ತಿದ್ದರೂ ಸಂಕಟವಾಗಿ ಚಾನಲ್ ಬದಲಿಸಿಬಿಡುತ್ತಿದ್ದೆ. ಆದರೆ ನಾನು ತೆರೆಯ ಮೇಲೆ ಆ ಪಾತ್ರವನ್ನು ನಿರ್ವಹಿಸಬೇಕು; ಜೀವಿಸಬೇಕು. ಅದು ಕಲಾವಿದೆಯಾಗಿ ನನಗೆ ಅನಿವಾರ್ಯ. ಹೀಗೆ ಬೇರೆ ಬೇರೆ ಪಾತ್ರಗಳನ್ನು ಎದುರಿಸಿ, ನನ್ನೊಳಗೆ ಆವಾಹಿಸಿಕೊಂಡಾಗೆಲ್ಲ ನಾನು ಇನ್ನಷ್ಟು ಬೆಳೆದಿದ್ದೇನೆ; ಪ್ರಬುದ್ಧಳಾಗಿದ್ದೇನೆ. ಬದುಕಿನ ಕುರಿತಾದ ಹಲವು ಭ್ರಮೆಗಳು ಒಡೆದಿವೆ. ಹಾಗೆಯೇ ಹೊಸ ನಂಬಿಕೆಯೂ ಹುಟ್ಟಿದೆ. ನಟಿಯಾಗಿ ತಾಳ್ಮೆ ಕಲಿತಿದ್ದೇನೆ. ಬದುಕನ್ನು ನೋಡುವ ರೀತಿ ಬದಲಾಗಿದೆ. ಅಭಿನಯದ ಮೂಲಕ ಕಲಿತಿರುವ ತುಂಬ ವಿಷಯಗಳು ನನ್ನ ವೈಯಕ್ತಿಕ ಬದುಕನ್ನು ಅರ್ಥಮಾಡಿಕೊಳ್ಳಲು, ರೂಪಿಸಿಕೊಳ್ಳಲು ಸಹಾಯಕವಾಗಿವೆ.

ಚಿತ್ರರಂಗ ಎಷ್ಟೋ ಸಲ ಮಹಿಳೆಯರ ಪಾಲಿಗೆ ನರಕವಾಗುವುದೂ ಇದೆಯಲ್ಲವೇ?

ಎಲ್ಲ ಕ್ಷೇತ್ರದಲ್ಲಿಯೂ ಹುಳಗಳು ಇದ್ದೇ ಇರುತ್ತವೆ. ನಾವು ಅಕ್ಕಿಯಲ್ಲಿರುವ ಹುಳಗಳನ್ನು ತೆಗೆದು ಬರಿಯ ಅಕ್ಕಿ ಬೇಯಿಸಿಕೊಂಡು ತಿನ್ನುತ್ತೇವಲ್ಲ, ಹಾಗೆಯೇ ಚಿತ್ರರಂಗ. ಕೆಟ್ಟದ್ದನ್ನು ಬದಿಗಿರಿಸಿ ಒಳ್ಳೆಯದನ್ನು ಆಯ್ದುಕೊಳ್ಳುವ ವಿವೇಚನೆ ಇದ್ದರೆ, ಚಿತ್ರರಂಗ ನಿಮ್ಮ ಪಾಲಿಗೆ ಸ್ವರ್ಗದ ಅನುಭವ ನೀಡುತ್ತದೆ. ಎಲ್ಲಿ ಕೆಟ್ಟದ್ದಿಲ್ಲ ಹೇಳಿ? ಇದೊಂದು ಕನ್ನಡಿ ಇದ್ದ ಹಾಗೆ. ನಾವು ಹೇಗೆ ನಡೆದುಕೊಳ್ಳುತ್ತೇವೆಯೋ, ಇಂಡಸ್ಟ್ರಿ ನಮ್ಮ ಜೊತೆ ಹಾಗೆಯೇ ನಡೆದುಕೊಳ್ಳುತ್ತದೆ. ಇದು ನನ್ನ ಅನುಭವದ ಮಾತು.

ನಟನೆಯ ಜೊತೆಗೆ ಸಿನಿಮಾದ ಬೇರೆ ವಿಭಾಗಗಳಲ್ಲಿ ಕೆಲಸ ಮಾಡುವ ಆಸಕ್ತಿ ಇಲ್ಲವೇ?

ನಾನು ಈ ಕ್ಷಣದಲ್ಲಿ ಬದುಕುವವಳು. ಈ ಕ್ಷಣದಲ್ಲಿ ಒಳ್ಳೆಯ ಸಿನಿಮಾಗಳನ್ನು ಮಾಡಬೇಕು, ಇರುವಷ್ಟು ದಿನ ಒಳ್ಳೆಯ ಹೆಸರು ತೆಗೆದುಕೊಳ್ಳಬೇಕು ಎಂಬುದಷ್ಟೇ ನನ್ನ ತಲೆಯಲ್ಲಿದೆ. ಮುಂದೆ ನಾನು ನನ್ನ ವಿದ್ಯಾರ್ಹತೆಯ ಕೆಲಸಕ್ಕೆ ಹೋಗಬಹುದು ಅಥವಾ ಮದುವೆಯಾಗಿ ಆರಾಮವಾಗಿ ಎರಡು ಮಕ್ಕಳನ್ನು ಮಾಡಿಕೊಂಡು ಇದ್ದುಬಿಡಬಹುದು. ಏನು ಮಾಡ್ತೀನೋ ಗೊತ್ತಿಲ್ಲ. ಯಾವುದರಲ್ಲಿ ನೆಮ್ಮದಿ ಕಾಣುತ್ತದೆಯೋ ಅದನ್ನು ಮಾಡುತ್ತೇನೆ.

ಚಿತ್ರ: ಪ್ರಜ್ವಲ್ ಬಿ.ಕೆ.

### ತಿರಸ್ಕಾರಕ್ಕೊಳಗಾಗುವ ಸಂಕಟ

ಸುಮಾರು ಆಡಿಷನ್‌ಗಳಿಗೆ ಹೋದಾಗ ಯಾವ್ಯಾವುದೋ ಕಾರಣ ನೀಡಿ ತಿರಸ್ಕಾರ ಮಾಡುತ್ತಿದ್ದರು. ಅದು ಅವರ ಆಯ್ಕೆ. ಆದರೆ ಆ ಜಾಗಕ್ಕೆ ನನಗಿಂತ ಬೆಟರ್ ಆದವರನ್ನು ಆಯ್ದುಕೊಳ್ಳಬೇಕಲ್ಲವೇ? ಎಷ್ಟೋ ಸಲ ಭಾಷೆಯೇ ಬರಲ್ಲ, ನಟನೆಯ ಗಂಧ ಇರುವುದಿಲ್ಲ. ನಮ್ಮನ್ನು ತಿರಸ್ಕರಿಸಿ ಅಂಥವರನ್ನು ಹಾಕಿಕೊಂಡು ಸಿನಿಮಾ ಮಾಡಿದಾಗ ನೋವಾಗುತ್ತದೆ. ನಾನು ಬೇರೆ ಭಾಷೆಗಳ ಸಿನಿಮಾ ಮಾಡೋದು ದೊಡ್ಡ ವಿಷಯ ಅಲ್ಲವೇ ಅಲ್ಲ. ಪಟಕ್ ಅಂತ ಬೇರೆ ಭಾಷೆ ಸಿನಿಮಾ ಮಾಡಬಹುದು. ಆದರೆ ನಾನು, ನನ್ನ ನಾಡಿನಲ್ಲಿ ಏನಾದ್ರೂ ಸಾಧನೆ ಮಾಡಬೇಕು. ನಮ್ಮ ನಾಯಕರು, ನಮ್ಮ ನಿರ್ದೇಶಕರ ಜೊತೆಗೇ ಕೆಲಸ ಮಾಡಬೇಕು ಅಂತ ಹಟದಿಂದ ಮಾಡುತ್ತಿದ್ದೇನೆ. ಕೆಲವೊಮ್ಮೆ ಹೊಟ್ಟೆ ಉರಿಯುತ್ತದೆ. ಈಗ ಒಳ್ಳೆಯ ಅವಕಾಶಗಳು ಸಿಗುತ್ತಿವೆ. ಖುಷಿಯಾಗಿದೀನಿ. ನಾನು ಅಂದುಕೊಂಡ ದಾರಿಯಲ್ಲಿಯೇ ಸಾಗುತ್ತಿದ್ದೇನೆ.

